# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

**ದಿನಾಂಕ: 26.08.2022ರಂದು ಪೂರ್ವಾಹ್ನ 11.00** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಡಾ.ವಿದ್ಯಾಶಂಕರ್.ಎಸ್.ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ನಡೆದ ವ್ಯವಸ್ಥಾಪನಾ ಮಂಡಳಿಯ **169ನೇ** ಸಾಮಾನ್ಯ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಡಾ. ವಿದ್ಯಾಶಂಕರ್.ಎಸ್.**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಡಾ. ಎ. ಖಾದರ್ ಪಾಷ**<br>ಕುಲಸಚಿವರು (ಪ್ರಭಾರ) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು,<br>ಕರಾಮುವಿ, ಮೈಸೂರು |
| **ಶ್ರೀ ಎಲ್. ನಾಗೇಂದ್ರ**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 2373/ಸಿ, 1ನೇ ಅಡ್ಡ ರಸ್ತೆ,<br>5ನೇ ಮುಖ್ಯ ರಸ್ತೆ, ಜಯನಗರ,<br>ಮೈಸೂರು – 570 014 | **ಶ್ರೀ ಪುಟ್ಟಣ್ಣ**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಕಛೇರಿ ವಿಳಾಸ : ನಂ.5009<br>5ನೇ ಮಹಡಿ, ಶಾಸಕರ ಭವನ- 5<br>ಬೆಂಗಳೂರು – 560 001 |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮೈಸೂರು | **ಡಾ. ಆರ್.ಹೆಚ್. ಅಕಮಂಚಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 55, 'ಕಾಮಧೇನು'<br>ಕೃಷ್ಣಾ ಬಡಾವಣೆ, ಲಕ್ಷ್ಮೀ ನಗರ, ಗೋಕುಲ ರಸ್ತೆ,<br>ಹುಬ್ಬಳ್ಳಿ – 580 030 |
| **ಪ್ರೊ. ಯಶಸ್ವಿನಿ.ಎಸ್.**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 303, 2ನೇ ಮಹಡಿ<br>ಗೌರವ್ ದಿ ರೆಸಿಡೆನ್ಸಿ ಅಪಾರ್ಟ್‌ಮೆಂಟ್<br>1ನೇ ಮುಖ್ಯ ರಸ್ತೆ, ಲಕ್ಷ್ಮೀ ಪುರಂ,<br>ಮೈಸೂರು – 570 004 | **ಶ್ರೀ ಎನ್. ಕೃಷ್ಣೇಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 150, 2ನೇ ಅಡ್ಡ ರಸ್ತೆ, 'ಐ' ಬ್ಲಾಕ್<br>ಕುವೆಂಪುನಗರ,<br>ಮೈಸೂರು – 570 023 |
| **ಡಾ. ಪ್ರದೀಪ್.ಪಿ.ಆರ್.,**<br>ನಂ. 1653, 1ನೇ ಮಹಡಿ, 5ನೇ ಅಡ್ಡ ರಸ್ತೆ,<br>6ನೇ ಸಿ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ,<br>ಬೆಂಗಳೂರು – 560 040 | **ಶ್ರೀಮತಿ ಲಾವಣ್ಯ.ಪಿ.**<br>ನಂ. 401, ಟಿ.ಎಫ್. ಮಾಲ್ಗುಡಿ ಅಪಾರ್ಟ್‌ಮೆಂಟ್<br>ನಾದಬ್ರಹ್ಮ ಸಂಗೀತ ಸಭಾ ಎದುರುಗಡೆ<br>ಲಕ್ಷ್ಮೀಪುರಂ,<br>ಮೈಸೂರು – 570 004 |

ಕುಲಪತಿಗಳು

ಕುಲಸಚಿವರು

| ಅನುಪಸ್ಥಿತರು | |
|---|---|
| **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು<br>ಬೆಂಗಳೂರು – 560 001 | **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| **ಶ್ರೀ ಬಿ.ಸಿ. ನಾಗೇಶ್.,**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 93, 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ<br>ಕೆ.ಆರ್. ಬಡಾವಣೆ, ತಿಪಟೂರು ತಾಲ್ಲೂಕು<br>ತುಮಕೂರು ಜಿಲ್ಲೆ – 572 201 | **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ |
| **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ<br>ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ, ಮಂಗಳ ಗಂಗೋತ್ರಿ,<br>ಮಂಗಳೂರು – 574 199 | -- |

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ನಂತರ, ಮಾನ್ಯ ಕುಲಪತಿಗಳು ವಿಷಯಸೂಚಿ ಪ್ರಕಾರ 169ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಚರ್ಚಿಸಲು ಆರಂಭಿಸಿದರು.

<u>ವಿಷಯ ಸಂಖ್ಯೆ : 169.01</u>

ಅ) ದಿನಾಂಕ: 17.06.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 168ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಆ) ದಿನಾಂಕ: 17.06.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 168ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸುವ ಬಗ್ಗೆ.

**ಅ) ದಿನಾಂಕ: 17.06.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 168ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸಲಾಯಿತು.**

**ಆ) ದಿನಾಂಕ: 17.06.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 168ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.**

* * * * * * *

<u>ವಿಷಯ ಸಂಖ್ಯೆ : 169.02</u>

**ವಿಷಯ: ಕರಾಮುವಿಯ ಪ್ರಾದೇಶಿಕ ಕೇಂದ್ರ, ಚಾಮರಾಜನಗರ ಇಲ್ಲಿನ ಕಟ್ಟಡದ ಕೊಠಡಿಯನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ, ರವರಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳಲು ನೀಡುವ ಬಗ್ಗೆ.**

* * * * * * *

ಕುಲಪತಿಗಳು

ಕುಲಸಚಿವರು

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ರವರು ಚಾಮರಾಜನಗರದಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಕರಾಮುವಿಯ ಪ್ರಾದೇಶಿಕ ಕೇಂದ್ರ, ಚಾಮರಾಜನಗರ, ಇಲ್ಲಿನ ಕಟ್ಟಡವನ್ನು ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳಲು ನೀಡುವಂತೆ ಕೋರಿಕೊಂಡಿರುತ್ತಾರೆ.

ವಿವಿಧ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಈಗಾಗಲೇ ಕನ್ನಡ ವಿಶ್ವವಿದ್ಯಾಲಯ, ಹಂಪಿ, ರವರಿಗೆ ಕರ್ನಾಟಕ ಸರ್ಕಾರವು ಚಾಮರಾಜನಗರ ಜಿಲ್ಲೆಯ ಯಡಪುರ ಗ್ರಾಮದಲ್ಲಿ 9.36 ಎಕರೆ ಜಮೀನನ್ನು ಮಂಜೂರು ಮಾಡಿರುತ್ತದೆ. ಈ ಸ್ಥಳದಲ್ಲಿ ಕನ್ನಡ ವಿಶ್ವವಿದ್ಯಾಲಯವು ಸ್ನಾತಕೋತ್ತರ ಕೇಂದ್ರ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ಕಟ್ಟಡಗಳನ್ನು ನಿರ್ಮಿಸುವರೆಗೆ, ಉತ್ತಮ ಶೈಕ್ಷಣಿಕ ವಾತಾವರಣವಿರುವ ಕರಾಮುವಿಯ ಪ್ರಾದೇಶಿಕ ಕೇಂದ್ರ, ಚಾಮರಾಜನಗರ, ಇಲ್ಲಿನ ಕಟ್ಟಡದ 2ನೇ ಅಂತಸ್ತಿನ ಎರಡು ಕೊಠಡಿಗಳನ್ನು ತಾತ್ಕಾಲಿಕವಾಗಿ ನೀಡುವಂತೆ ಡಾ. ಸ.ಚಿ. ರಮೇಶ, ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಇವರು ಕರಾಮುವಿಗೆ ದಿನಾಂಕ: 13-05-2022 ಮತ್ತು 15-07-2022 ಗಳಂದು ಪತ್ರದ ಮೂಲಕ ಮನವಿ ಮಾಡಿಕೊಂಡಿರುತ್ತಾರೆ.

ಹಾಗಾಗಿ, ಮೇಲ್ಕಂಡ ಅಂಶಗಳನ್ನು ಸಭೆಯ ಗಮನಕ್ಕೆ ತರುತ್ತಾ, ಸದರಿ ವಿಷಯದ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

* * * * * * *

ತೀರ್ಮಾನ :

ಸಭೆಯಲ್ಲಿ ವಿಷಯವನ್ನು ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ, ಬಾಡಿಗೆ ದರದ ಬಗ್ಗೆ ಪೂರ್ಣ ಮಾಹಿತಿಯು ಲಭ್ಯವಿರುವುದಿಲ್ಲ. ಪಿ.ಡಬ್ಲ್ಯು.ಡಿ. ದರದ ಪ್ರಕಾರವಾಗಿ ಬಾಡಿಗೆ ನಿಗಧಿಪಡಿಸಲಾಗಿದೆಯೇ? ಎಂಬುದರ ಬಗ್ಗೆ ಸ್ಪಷ್ಟನೆ ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು, ಬಾಡಿಗೆಯನ್ನು ಪಿ.ಡಬ್ಲ್ಯು.ಡಿ. ದರದನ್ವಯ ನಿಗಧಿಪಡಿಸಿರುವುದಿಲ್ಲವೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಮುಂದುವರೆದು ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಕನಿಷ್ಟ ರೂ.10,000/-ಗಳನ್ನು ಬಾಡಿಗೆಯಾಗಿ ನಿಗಧಿಪಡಿಸುವಂತೆ ಸೂಚಿಸಿದರು. ಸಭೆಯು, ಇದಕ್ಕೆ ಅನುಮೋದನೆಯನ್ನು ನೀಡಿತು.

## ವಿಷಯ ಸಂಖ್ಯೆ: 169.03

**ವಿಷಯ : ಕರಾಮುವಿಯ ವಿಜಯನಗರ 3ನೇ ಹಂತದದಲ್ಲಿರುವ ಶೈಕ್ಷಣಿಕ ಕಟ್ಟಡದ ಕೊಠಡಿಯನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಹಾವೇರಿ, ಇವ'ರಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳಲು ನೀಡುವ ಬಗ್ಗೆ.**

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಹಾವೇರಿ, ರವ'ರು ವಿವಿಧ ಸರ್ಟಿಫಿಕೇಟ್ ಹಾಗೂ ಡಿಪ್ಲೊಮಾ ಕೋರ್ಸ್‌ಗಳನ್ನು ಮೈಸೂರಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿರುತ್ತಾರೆ. ಇದಕ್ಕಾಗಿ ಮೈಸೂರಿನಲ್ಲಿ ಪ್ರಾದೇಶಿಕ ಕಲಿಕಾ ಕೇಂದ್ರವನ್ನು ಆರಂಭಿಸಿ, ಜಾನಪದ ವಿವಿಯ ವಿವಿಧ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಕರಾಮುವಿಯ ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ಶೈಕ್ಷಣಿಕ ಕಟ್ಟಡದ ಕೆಳ ಅಂತಸ್ತಿನ ಒಂದು ಕೊಠಡಿಯನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳಲು ನೀಡುವಂತೆ ಜಾನಪದ

ಕುಲಪತಿಗಳು ಕುಲಸಚಿವರು

ವಿಶ್ವವಿದ್ಯಾನಿಲಯದ ಕುಲಪತಿಗಳು ದಿನಾಂಕ: 11-07-2022 ರಂದು ಕರಾಮುವಿಗೆ ಪತ್ರದ ಮುಖಾಂತರ ಕೋರಿರುತ್ತಾರೆ.

ಹಾಗಾಗಿ, ಮೇಲ್ಕಂಡ ಅಂಶಗಳನ್ನು ಸಭೆಯ ಗಮನಕ್ಕೆ ತರುತ್ತಾ, ಸದರಿ ವಿಷಯದ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

* * * * * * *

<u>ತೀರ್ಮಾನ</u> :

ವಿಷಯವನ್ನು ಸಭೆಯಲ್ಲಿ ಅವಗಾಹಿಸಲಾಯಿತು. ಸದರಿ ವಿಷಯವು ವಿಷಯ ಸಂಖ್ಯೆ : 169.02ರ ಮಾದರಿಯಾಗಿದ್ದು, ಕೊಠಡಿ ಸಂಖ್ಯೆಗಳಲ್ಲಿ ವ್ಯತ್ಯಾಸವಾಗಿರುತ್ತದೆ. ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಒಂದೇ ಕೊಠಡಿಗೆ ಕೋರಿಕೆ ಇರುವುದರಿಂದ ರೂ.5,000/- ಗಳನ್ನು ಮಾಸಿಕ ಬಾಡಿಗೆಯಾಗಿ ಕೊಡುವಂತೆ ತೀರ್ಮಾನಿಸಿತು.

<u>ವಿಷಯ ಸಂಖ್ಯೆ: 169.04</u>

ವಿಷಯ : ವಿಶ್ವವಿದ್ಯಾನಿಲಯದ ತಾತ್ಕಾಲಿಕ ಬೋಧಕ ಮತ್ತು ಬೋಧಕೇತರ ಮಹಿಳಾ ನೌಕರರಿಗೆ ಮಾತೃತ್ವ(ಹೆರಿಗೆ) ರಜೆಯ ಸೌಲಭ್ಯವನ್ನು ವಿಸ್ತರಿಸುವ ಕುರಿತು.

* * * * * * *

ಕರ್ನಾಟಕ ಸರ್ಕಾರಿ ಅದೇಶ ಸಂಖ್ಯೆ: ಆಇ 08 ಎಸ್ಆರ್ಎಸ್ 2022, ದಿನಾಂಕ: 23.06.2022 ರಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ಅಂಗ ಸಂಸ್ಥೆಗಳಾದ ನಿಗಮ/ಮಂಡಳಿ/ಸ್ವಾಯತ್ತ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಹಿಳಾ ನೌಕರರಿಗೆ ಷರತ್ತಿಗೊಳಪಟ್ಟು ಮಾತೃತ್ವ ರಜೆಯ ಸೌಲಭ್ಯವನ್ನು ವಿಸ್ತರಿಸಲಾಗಿರುತ್ತದೆ (ಅನುಬಂಧ-ಅ). ಅದರಂತೆ ಸದರಿ ಸರ್ಕಾರಿ ಆದೇಶದಲ್ಲಿನ ಮಾತೃತ್ವ (ಹೆರಿಗೆ) ರಜೆಯ ಸೌಲಭ್ಯವನ್ನು ಯಥಾವತ್ತಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಬೋಧಕ ಮತ್ತು ಬೋಧಕೇತರ ಮಹಿಳಾ ನೌಕರರಿಗೆ ವಿಸ್ತರಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

* * * * * * *

<u>ತೀರ್ಮಾನ</u> :

ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಮಾತೃತ್ವ (ಹೆರಿಗೆ) ರಜೆಗೆ ಸಂಬಂಧಿಸಿದ ನಿಯಮಗಳು ಏಕಸಾಮ್ಯತೆಯಾಗಿ ಇರಬೇಕಾಗಿರುವುದರಿಂದ, ವಿ.ವಿ.ನಿಲಯದ ತಾತ್ಕಾಲಿಕ ಬೋಧಕ ಹಾಗೂ ಬೋಧಕೇತರ ಮಹಿಳಾ ನೌಕರರಿಗೆ ಮಾತೃತ್ವ (ಹೆರಿಗೆ) ರಜೆ ಸೌಲಭ್ಯವನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಸಭೆಯು ತೀರ್ಮಾನಿಸಿತು.

* * * * * * *

<u>ವಿಷಯ ಸಂಖ್ಯೆ: 169.05</u>

ವಿಷಯ : ಶ್ರೀಮತಿ ಮಂಗಳಮ್ಮ ಕೋ ಲೇಟ್ ಮಹದೇವಯ್ಯ, ಹನುಮನಪುರ, ಕೌಲಂದೆ (ಹೋ), ನಂಜನಗೂಡು(ತಾ), ಮೈಸೂರು(ಜಿಲ್ಲೆ), ಇವರು ವಿ.ವಿ.ನಿಲಯದಲ್ಲಿ ಸೂಕ್ತ ಉದ್ಯೋಗ ಕೋರಿ ಸಲ್ಲಿಸಿರುವ ಮನವಿ ಕುರಿತು.

* * * * * * *

ಕುಲಪತಿಗಳು



ಕುಲಸಚಿವರು

ಲೇಟ್. ಮಹದೇವಯ್ಯ, ಇವರು ಕರಾಮುವಿಯಲ್ಲಿ ದ್ವಿ.ದ.ಗುಮಾಸ್ತರಾಗಿ (ಕಾಲಿಕ ವೇತನ ಶ್ರೇಣಿ ನೌಕರ) ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ:17.07.2022 ರಂದು ಅಕಾಲಿಕ ಮರಣ ಹೊಂದಿರುವ ಹಿನ್ನೆಲೆಯಲ್ಲಿ, ಸದರಿ ಮೃತ ನೌಕರರ ಪತ್ನಿ ಶ್ರೀಮತಿ ಮಂಗಳಮ್ಮ, ಇವರು ದಿನಾಂಕ:12.08.2022 ರಂದು ಮಾನ್ಯ ಕುಲಪತಿಗಳಿಗೆ ಮನವಿ ಪತ್ರ ಸಲ್ಲಿಸಿ ತಮಗೆ 13 ವರ್ಷದ ಒಬ್ಬ ಮಗನಿದ್ದು, ಇದುವರೆವಿಗೂ ಲೇಟ್. ಮಹದೇವಯ್ಯ ಇವರಿಗೆ ವಿಶ್ವವಿದ್ಯಾನಿಲಯದಿಂದ ಬರುತ್ತಿದ್ದ ವೇತನದಿಂದಲೇ ನಮ್ಮ ಕುಟುಂಬ ನಿರ್ವಹಣೆ ಮಾಡುತ್ತಿದ್ದು, ತಮ್ಮ ಪತಿಯವರ ಮರಣ ನಂತರ ಯಾವುದೇ ಆದಾಯವಿಲ್ಲದೆ ತಮ್ಮ ಜೀವನ ನಿರ್ವಹಣೆ ಕಷ್ಟಕರವಾಗಿರುವುದರಿಂದ 4ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವ ನನಗೆ ವಿಶ್ವವಿದ್ಯಾನಿಲಯದಲ್ಲಿ ಸೂಕ್ತ ಉದ್ಯೋಗ ನೀಡಿ ಅನುಕೂಲ ಮಾಡಿಕೊಡುವಂತೆ ಕೋರಿರುತ್ತಾರೆ (ಅನುಬಂಧ-ಅ).

ಲೇಟ್. ಮಹದೇವಯ್ಯ, ದ್ವಿ.ದ.ಗುಮಾಸ್ತ (ಕಾಲಿಕ ವೇತನ ಶ್ರೇಣಿ ನೌಕರ), ಇಂದ ಮತ್ತು ಗೆ ವಿಭಾಗ, ಕರಾಮುವಿ, ಇವರು ತಾತ್ಕಾಲಿಕ ನೌಕರರಾಗಿ ದಿನಾಂಕ:26.04.2002 ರಂದು ವಿ.ವಿ.ನಿಲಯದ ಸೇವೆಗೆ ನೇಮಕಗೊಂಡಿದ್ದು ದಿನಾಂಕ: 04.11.2005ರವರೆಗೆ ಹಾಗೂ ದಿನಾಂಕ:27.01.2010 ರಿಂದ 17.07.2022ರವರೆಗೆ ವಿ.ವಿ.ನಿಲಯದಲ್ಲಿ ಸುಮಾರು 15 ವರ್ಷಗಳಿಗೂ ಹೆಚ್ಚು ಸೇವೆ ಸಲ್ಲಿಸಿರುತ್ತಾರೆ ಎಂಬ ಅಂಶವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅವಗಾಹನೆಗಾಗಿ ತರುತ್ತಾ, ಸದರಿ ಮೃತ ನೌಕರರ ಪತ್ನಿ ಶ್ರೀಮತಿ ಮಂಗಳಮ್ಮ, ಇವರು ವಿ.ವಿ.ನಿಲಯದಲ್ಲಿ ಸೂಕ್ತ ಉದ್ಯೋಗ ನೀಡುವಂತೆ ಸಲ್ಲಿಸಿರುವ ಮನವಿ ಸಂಬಂಧ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

* * * * * * *

<u>ತೀರ್ಮಾನ</u> :

**ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಮರಣ ಹೊಂದಿರುವ ವ್ಯಕ್ತಿಯು ವಿ.ವಿ.ನಿಲಯದಲ್ಲಿ ಕಾಲಿಕ ವೇತನ ಶ್ರೇಣಿಯಲ್ಲಿ ದ್ವಿತೀಯ ದರ್ಜೆ ಗುಮಾಸ್ತರಾಗಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಹಿನ್ನೆಲೆಯಲ್ಲಿ, ದಿವಂಗತ ಶ್ರೀ ಮಹದೇವಯ್ಯ ಇವರ ಪತ್ನಿಗೆ ಅವರ ವಿದ್ಯಾರ್ಹತೆಗೆ ಅನುಗುಣವಾಗಿ ತಾತ್ಕಾಲಿಕ ಉದ್ಯೋಗ ನೀಡುವುದು ಸೂಕ್ತವೆಂದು ಸಭೆಯು ನಿರ್ಣಯಿಸಿತು.**

* * * * * * *

<u>ವಿಷಯ ಸಂಖ್ಯೆ :- 169.06</u>

**ವಿಷಯ : ಕರಾಮುವಿಯ ಮಂಗಳೂರಿನ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ಕಟ್ಟಡ ನಿರ್ಮಾಣ ಪರವಾನಗಿ/ರಹದಾರಿ ಪಡೆಯಲು ಶುಲ್ಕವನ್ನು ಪಾವತಿಸುವುದರ ಬಗ್ಗೆ.**

* * * * * * *

ಕರಾಮುವಿ ನಿಲಯವು ಮಂಗಳೂರಿನಲ್ಲಿ ವಿವಿನಿಲಯದ ಪ್ರಾದೇಶಿಕ ಕೇಂದ್ರ ಕಟ್ಟಡವನ್ನು ನಿರ್ಮಿಸಲು ಕ್ರಮವಹಿಸುತ್ತಿದ್ದು, ಸದರಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸುವುದಕ್ಕೆ ಮಂಗಳೂರಿನ ಮಹಾನಗರ ಪಾಲಿಕೆಯ ಅನುಮತಿಯನ್ನು ಪಡೆಯಲು ಈಗಾಗಲೇ Pollution Control Board, Fire Department, ಮಂಗಳೂರು ನಗರ ಪ್ರಾಧಿಕಾರ ರವರಿಂದ Clearance Certificate (NOC) ಪಡೆದಿದ್ದು ಪ್ರಸ್ತುತ ಕಟ್ಟಡ ನಿರ್ಮಾಣ / ರಹದಾರಿ ಪಡೆಯಲು ಶುಲ್ಕವಾಗಿ ರೂ. 17,84,320/-ಗಳನ್ನು ಪಾವತಿಸಬೇಕಾಗಿರುತ್ತದೆ. ಆದುದರಿಂದ ವಿವಿನಿಲಯದ ವತಿಯಿಂದ ಮಂಗಳೂರು ಮಹಾನಗರ ಪಾಲಿಕೆಗೆ ಕಟ್ಟಡ ನಿರ್ಮಾಣ ಪರವಾನಗಿ/ರಹದಾರಿ ಶುಲ್ಕವನ್ನು ಪಾವತಿಸುವುದರ ಬಗ್ಗೆ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

* * * * * * *

ಕುಲಪತಿಗಳು ಕುಲಸಚಿವರು

ತೀರ್ಮಾನ :

ವಿಷಯವನ್ನು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ, ಮಂಗಳೂರಿನಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಸಂಬಂಧ ರೂ.17,84,320/- ಗಳನ್ನು, ರಹದಾರಿ ಶುಲ್ಕವಾಗಿ ಪಾವತಿಸುವುದು ಹೆಚ್ಚಾಯಿತೆಂದು, ಸಾಧ್ಯವಿದ್ದಲ್ಲಿ, ಇದನ್ನು waive off ಮಾಡಿಸುವಂತೆ ಅಭಿಪ್ರಾಯ ನೀಡಿ, waive off ಸಾಧ್ಯವಾಗದಿದ್ದಲ್ಲಿ, ಕಡಿಮೆ ಮೊತ್ತವನ್ನು ಪಾವತಿಸಲು ಸಂಬಂಧಪಟ್ಟವರೊಂದಿಗೆ ವ್ಯವಹರಿಸಿ, ಆನಂತರ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು. ಸಭೆಯು ಇದನ್ನು ಸರ್ವಾನುಮತದಿಂದ ಅಂಗೀಕರಿಸಿತು.

* * * * * * *

ವಿಷಯ ಸಂಖ್ಯೆ :- 169.07

ವಿಷಯ : ಕರಾಮುವಿಯು ನಿಯೋಜನೆ ಮಾಡಿಕೊಂಡಿರುವ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರ ಅವಧಿಯ ಕಾಲವಿಸ್ತರಣೆಯನ್ನು ಮಾಡುವುದರ ಬಗ್ಗೆ

* * * * * * *

ಕರಾಮುವಿಯು ರಾಮನಗರ ಜಿಲ್ಲೆಯ ತಿಪ್ಪಸಂದ್ರ ಗ್ರಾಮದಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಮತ್ತು ಮಂಗಳೂರು, ಧಾರವಾಡ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡಗಳನ್ನು ನಿರ್ಮಿಸಲು ಕರಾಮುವಿಯ ಮೈಸೂರು ಕೇಂದ್ರ ಕಛೇರಿಯಲ್ಲಿ ಮಾನಸ ಮತ್ತು ಹಂಸ ಕಟ್ಟಡಗಳ ನವೀಕರಿಸಲು/ಉನ್ನತೀಕರಣ ಹಾಗೂ ದುರಸ್ಥಿ ನಿರ್ವಹಣೆ ಕೆಲಸ ಹಾಗೂ ವಿವಿನಿಲಯವು ದತ್ತುಪಡೆದಿರುವ ಸರ್ಕಾರಿ ಶಾಲೆಗಳ ದುರಸ್ಥಿ ನಿರ್ವಹಣೆ ಮತ್ತು ಕಟ್ಟಡ ನಿರ್ಮಾಣ ಕೆಲಸಗಳಿಗೆ ಸಂಬಂಧಿಸಿದಂತೆ ವಿವಿನಿಲಯವು ನಿಯಮಾನುಸಾರ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರನ್ನು 2020-21 ಸಾಲಿನಲ್ಲಿ ನೇಮಿಸಿಕೊಂಡಿದ್ದು, ಪ್ರಸ್ತುತ ಸದರಿ ವಿನ್ಯಾಸಗಾರರ ಕಾರ್ಯದ ಅವಧಿಯು ಸೆಪ್ಟಂಬರ್ 2022ಕ್ಕೆ ಅಂತ್ಯಗೊಳ್ಳುತ್ತಿರುತ್ತದೆ. ಈ ಸಂಬಂಧ ಕಾಮಗಾರಿ ಕೆಲಸಗಳನ್ನು ನಿರ್ವಹಿಸಲು ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರು ನಕ್ಷೆ, ಅಂದಾಜು ಮತ್ತು ವಿನ್ಯಾಸವನ್ನು ಸಿದ್ಧಪಡಿಸಿ ಹಂತಹಂತವಾಗಿ ಸಲ್ಲಿಸುತಿರುತ್ತಾರೆ. ಆದರೆ ಕೆಲವು ತಾಂತ್ರಿಕ ಕಾರಣಗಳಿಂದಾಗಿ ಕಾಮಗಾರಿಗಳ ಕೆಲಸವನ್ನು ಪ್ರಾರಂಭಿಸಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಕಾಲಾವಕಾಶವಿದ್ದು, ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸುವವರೆಗೆ ವಾಸ್ತುಶಿಲ್ಪಗಾರರು ಸದರಿ ಕಾಮಗಾರಿ ಕೆಲಸಗಳಿಗೆ ಅಗತ್ಯಅನುಗುಣವಾಗಿ ನಕ್ಷೆ ಹಾಗೂ ವಿನ್ಯಾಸಗಳನ್ನು ನೀಡಬೇಕಿರುತ್ತದೆ. ಆದುದರಿಂದ ವಿವಿನಿಲಯವು ನೇಮಿಸಿಕೊಂಡಿರುವ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರಾದ M/S. Girish M.Swamy Consultants, Bengaluru ರವರಿಗೆ ಈ ಎಲ್ಲಾ ಕಾಮಗಾರಿ ಕೆಲಸಗಳನ್ನು ಪೂರ್ಣಗೊಳಿಸುವವರೆಗೆ ಕಾಲವಿಸ್ತರಣೆಯನ್ನು ಮಾಡುವುದರ ಬಗ್ಗೆ ಸದರಿ ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

* * * * * * *

ತೀರ್ಮಾನ :

ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, 2020-21ನೇ ಸಾಲಿನಲ್ಲಿ ವಿ.ವಿ.ನಿಲಯವು ನಿಯಮಾನುಸಾರ ನೇಮಿಸಿಕೊಂಡಿರುವ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರಾದ ಮೆ. ಗಿರೀಶ್ ಎಂ. ಸ್ವಾಮಿ, ಕನ್ಸಲ್ಟೆಂಟ್ಸ್, ಬೆಂಗಳೂರು, ಇವರಿಗೆ ವಹಿಸಿರುವ ಎಲ್ಲಾ ಕಾಮಗಾರಿ ಕೆಲಸಗಳನ್ನು ಪೂರ್ಣಗೊಳಿಸುವವರೆಗೆ ಕಾಲ ವಿಸ್ತರಣೆ ಮಾಡಲು ಅನುಮೋದನೆ ನೀಡಿತು.

* * * * * * *

ಕುಲಪತಿಗಳು

ಕುಲಸಚಿವರು

ವಿಷಯ ಸಂಖ್ಯೆ :- 169.08

ವಿಷಯ : ಕರಾಮುವಿಯ ಮಂಡಕಳ್ಳಿ ಬಳಿ ನಿರ್ಮಿಸಿರುವ ಶೈಕ್ಷಣಿಕ ಭವನದ ಕಟ್ಟಡ ಹಾಗೂ 10 ಎಕರೆ ಜಾಗವನ್ನು ಬಾಡಿಗೆಗೆ ನೀಡುವುದರ ಬಗ್ಗೆ.

* * * * * * *

ಕರಾಮುವಿಯ ಮೈಸೂರಿನ ಮಂಡಕಳ್ಳಿಯ ಬಳಿ ಹತ್ತು ಎಕರೆಯ ವಿಸ್ತೀರ್ಣದ ಜಾಗದಲ್ಲಿ ನಿರ್ಮಿಸಲಾಗಿರುವ ಶೈಕ್ಷಣಿಕ ಭವನದ ಕಟ್ಟಡವನ್ನು ಹಾಗೂ ಹತ್ತು ಎಕರೆಯ ಜಾಗವನ್ನು Global Technology Center Plug & Play Facility ಯೋಜನೆಯನ್ನು ಕರ್ನಾಟಕ ಸರ್ಕಾರದ ಅಂಗಸಂಸ್ಥೆಯಾದ Karnataka Digital Economy Mission (KDEM) ಸಂಸ್ಥೆ ಹಾಗೂ Karnataka Innovation & Technology Society ರವರ ಸಹಭಾಗಿತ್ವದ ಮುಖಾಂತರ ಸ್ಥಾಪಿಸಲು ಬಾಡಿಗೆಗೆ ನೀಡುವುದರ ಬಗ್ಗೆ ಸೂಚಿಸಿ ಸರ್ಕಾರದ Under Secretary to Government, Department of Electronics, Information Technology, Biotechnology and Science & Technology Society ರವರು ಪತ್ರದಲ್ಲಿ ತಿಳಿಸಿರುತ್ತಾರೆ. ಈ ಸಂಬಂಧ ವಿವಿನಿಲಯದ ಶೈಕ್ಷಣಿಕ ಭವನದ ಕಟ್ಟಡವನ್ನು ಹಾಗೂ 10 ಎಕರೆ ಜಾಗವನ್ನು ಸದರಿರವರಿಗೆ 30 ವರ್ಷ (ಮೂವತ್ತು ವರ್ಷ) ಅವಧಿಗೆ ಬಾಡಿಗೆಯ ಆಧಾರದ ಮೇಲೆ ನೀಡುವುದರ ಬಗ್ಗೆ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

* * * * * * *

ತೀರ್ಮಾನ :

ಸದರಿ ವಿಷಯವನ್ನು ಸಭೆಯಲ್ಲಿ ಕೂಲಂಕಷವಾಗಿ ಹಾಗೂ ಗಂಭೀರವಾಗಿ ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ, ವಿ.ವಿ.ನಿಲಯವು ದೊಡ್ಡ ಮೊತ್ತದ ಹಣವನ್ನು ಹೂಡಿಕೆ ಮಾಡಿ ಕಟ್ಟಡ ನಿರ್ಮಿಸಿದ ಮೇಲೆ ವಿ.ವಿ.ನಿಲಯದ ಬಳಕೆಗೆ ಬಳಸಿಕೊಳ್ಳದೇ, ಬಾಡಿಗೆಗೆ ನೀಡುವುದರ ಔಚಿತ್ಯವೇನು? ಎಂಬ ಅಂಶವನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮಂಡಕಳ್ಳಿ ಬಳಿ ನಿರ್ಮಿಸಿರುವ ಶೈಕ್ಷಣಿಕ ಭವನ ಕಟ್ಟಡವನ್ನು ಅಂದಿನ ದಿನಗಳಲ್ಲಿ ವಿ.ವಿ.ಬಳಕೆಗೆ ಉಪಯೋಗಿಸಿಕೊಳ್ಳಲೆಂದೇ ನಿರ್ಮಿಸಿದ್ದಿದ್ದಾದರೂ, ವಿದ್ಯಾರ್ಥಿಗಳು ಭೇಟಿ ನೀಡುವುದಕ್ಕೆ ಅನುಕೂಲಗಳಿಲ್ಲವಾದ್ದರಿಂದ ಕಟ್ಟಡವನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಟ್ಟಡವನ್ನು ಉಪಯೋಗಿಸದೆ ಹಾಗೆಯೇ ಬಿಟ್ಟಲ್ಲಿ, ಕಟ್ಟಡವು ಶಿಥಿಲಗೊಳ್ಳುತ್ತದೆ ಹಾಗೂ ಅನ್ಯ ರೀತಿಯ ಚಟುವಟಿಕೆಗಳಿಗೆ ಎಡೆ ಮಾಡಿಕೊಟ್ಟಂತಾಗುತ್ತದೆ. ಹಾಗಾಗಿ, ಬಾಡಿಗೆಗೆ ಕೊಡುವುದು ಸೂಕ್ತವೆಂದು, ಇದರಿಂದ ವಿ.ವಿ.ನಿಲಯಕ್ಕೆ ಸ್ವಲ್ಪ ಮಟ್ಟದ ಆದಾಯ ದೊರೆಯುತ್ತದೆಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರುಗಳಾದ ಶ್ರೀ ಪುಟ್ಟಣ್ಣನವರು, ಡಾ. ಆರ್.ಎಚ್. ಅಕಮಂಚಿಯವರು ಮತ್ತು ಪ್ರೊ. ಎಸ್.ಯಶಸ್ವಿನಿ ಇವರುಗಳು ಮಾತನಾಡಿ, ಬಾಡಿಗೆಗೆ ನೀಡಬೇಕಾಗಿರುವ ಅವಧಿಯು 30 ವರ್ಷ ಬಹಳ ಹೆಚ್ಚಾಗಿದ್ದು, ಇದು ದೀರ್ಘಾವಧಿಯಾಗುತ್ತದೆ. ಒಮ್ಮೆಲೆ 30 ವರ್ಷಕ್ಕೆಂದು ಅವಧಿ ನಿಗಧಿಪಡಿಸುವುದರ ಬದಲು, ಪ್ರತೀ 7 ವರ್ಷಕ್ಕೆ ಅಥವಾ 10 ವರ್ಷಕ್ಕೆ ಅವಧಿ ನಿಗಧಿಗೊಳಿಸಿ ಬಾಡಿಗೆಗೆ ನೀಡುವುದು ಸೂಕ್ತವೆಂದು ಸಲಹೆ ನೀಡಿದರು.

ಸದಸ್ಯರಾದ ಮಾನ್ಯ ಶ್ರೀ ಪುಟ್ಟಣ್ಣನವರು ಮಾತನಾಡಿ, ಕಟ್ಟಡಕ್ಕೆ ಬಾಡಿಗೆಯನ್ನು ನಿಗಧಿಗೊಳಿಸುವ ಮೊತ್ತದ ಮೇಲೆ ಪ್ರತೀ ವರ್ಷ ಶೇ. 5 ರಷ್ಟು ಅಥವಾ ಪ್ರತಿ 3 ವರ್ಷಕ್ಕೆ

ಕುಲಪತಿಗಳು ಕುಲಸಚಿವರು

ಶೇ.10ರಷ್ಟು ಹೆಚ್ಚಾಗಿ ಬಾಡಿಗೆ ಲಭ್ಯವಾಗುವ ಅಂಶವೂ ಒಳಗೊಂಡಂತೆ ಒಪ್ಪಂದ ಪತ್ರ (ಅಗ್ರಿಮೆಂಟ್) ಮಾಡಿಕೊಂಡು ಬಾಡಿಗೆಗೆ ನೀಡುವುದು ಸರಿಯೆಂದು ಸಲಹೆ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ, ಶೈಕ್ಷಣಿಕ ಭವನ ಕಟ್ಟಡದ ಜೊತೆಗೆ 10 ಎಕರೆ ಜಾಗವನ್ನು ಬಾಡಿಗೆಗೆ ಕೊಡುವುದು ಸರಿಯಿಲ್ಲ. ಪೂರ್ಣ ಕಟ್ಟಡದ ಜೊತೆಗೆ 1 ಅಥವಾ 2 ಎಕರೆ ಜಾಗ ಮಾತ್ರ ಕೊಡುವುದು ಸೂಕ್ತವೆಂದು ತಿಳಿಸಿ, ಮುಂದಿನ ದಿನಗಳಲ್ಲಿ ವಿ.ವಿ.ನಿಲಯಕ್ಕೆ ಜಾಗದ ಅವಶ್ಯಕತೆ ಉಂಟಾದಾಗ ಉಳಿದ ಜಾಗವನ್ನು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ಆದ್ದರಿಂದ, ಕಟ್ಟಡದ ಜೊತೆಗೆ 2 ಎಕರೆ ಜಮೀನನ್ನು ಮಾತ್ರ ಬಾಡಿಗೆಗೆ ನೀಡುವುದು ಸೂಕ್ತವೆಂದು ಸಭೆಗೆ ತಿಳಿಸಿದರು. ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ನೀಡಿದ ಸಲಹೆ ಸರಿ ಇರುವುದಾಗಿ ಸದಸ್ಯರಾದ ಶ್ರೀ ಪುಟ್ಟಣ್ಣರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಎನ್.ಕೃಷ್ಣೇಗೌಡರವರು ಮಾತನಾಡಿ, ಇದು **tripartite rent agreement** ಆಗಿದ್ದು, ಬಾಡಿಗೆ ಕರಾರನ್ನು ಜಾಗರೂಕತೆಯಿಂದ ಮಾಡಿಕೊಳ್ಳುವಂತೆಯೂ, ಅಗತ್ಯವೆನಿಸಿದ ಅಂಶವನ್ನು ಕರಾರುಪತ್ರದಲ್ಲಿ ಕಾಣಿಸುವುದು ಒಳ್ಳೆಯದೆಂದು ಅಭಿಪ್ರಾಯಪಟ್ಟರು.

ಮಾನ್ಯ ಸದಸ್ಯರುಗಳಾದ ಶ್ರೀಮತಿ ಪಿ.ಲಾವಣ್ಯರವರು ಹಾಗೂ ಡಾ.ಪಿ.ಆರ್.ಪ್ರದೀಪ್ ಇವರುಗಳು ಮಾತನಾಡಿ, ಅಗ್ರಿಮೆಂಟ್ ಮಾಡಿಕೊಳ್ಳುವಾಗ ವಿ.ವಿ.ನಿಲಯವು ವಿಧಿಸುವ ಷರತ್ತಿಗಳಿಗೊಳಪಟ್ಟು ಅಗ್ರಿಮೆಂಟ್ ಮಾಡಿಕೊಳ್ಳುವುದು ಸೂಕ್ತವೆಂದು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರುಗಳ ಅಭಿಪ್ರಾಯ ಮತ್ತು ಸಲಹೆಗಳನ್ನು ಪಡೆದುಕೊಂಡ ಸಭೆಯು, ಸದಸ್ಯರುಗಳ ಅಭಿಪ್ರಾಯದಂತೆ **tripartite rent agreement** ಮಾಡಿಕೊಳ್ಳಲು ಪರಿಣಿತರ ಅಭಿಪ್ರಾಯ ಪಡೆದು, ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.

* * * * * * *

<u>ವಿಷಯ ಸಂಖ್ಯೆ : 169.09</u>

ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಶ್ರೀಮತಿ ಅಹಲ್ಯಾಬಾಯಿ ಹೋಳ್ಕರ್ ಅಧ್ಯಯನ ಪೀಠದ ಕರಡು ಪರಿನಿಯಮಕ್ಕೆ ಅನುಮೋದನೆ ಪಡೆಯುವ ಬಗೆಗೆ.

ಉಲ್ಲೇಖ : 1) ದಿನಾಂಕ: 20.05.2022 ರಂದು ನಡೆದ 59ನೇ ಶೈಕ್ಷಣಿಕ ಮಂಡಳಿಯ ಸಭೆಯ ನಿರ್ಣಯ.

2) ದಿನಾಂಕ: 17.06.2022 ರಂದು ನಡೆದ 168ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ನಿರ್ಣಯ.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ: 20.05.2022 ರಂದು ನಡೆದ 59ನೇ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ವಿಷಯದಲ್ಲಿ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಗಣ್ಯ ವ್ಯಕ್ತಿಗಳ ವಿಚಾರಗಳನ್ನು ಪ್ರಚುರ ಪಡಿಸುವ ಹಿತದೃಷ್ಟಿಯಿಂದ ಹೆಚ್ಚಿನ ಅಧ್ಯಯನ ಪೀಠಗಳನ್ನು

ಕುಲಪತಿಗಳು ಕುಲಸಚಿವರು

ಸ್ಥಾಪಿಸುವ ಉದ್ದೇಶಿತ ವಿಷಯವನ್ನು ಚರ್ಚಿತವಾಗಿದ್ದು, ಅದರಂತೆ ಶ್ರೀಮತಿ ಅಹಲ್ಯಾಬಾಯಿ ಹೋಳ್ಕರ್ ಇವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸುವ ಸಂಬಂಧ ಅನುಮೋದನೆ ಪಡೆದು, ಸದರಿ ವಿಷಯವನ್ನು ದಿನಾಂಕ 17.06.2022 ರಂದು ನಡೆದ 168ನೇ ವ್ಯವಸ್ಥಾಪನಾ ಮಂಡಳಿ ಸಭೆಯು ಒಪ್ಪಿರುತ್ತದೆ.

ಶ್ರೀಮತಿ ಅಹಲ್ಯಾಬಾಯಿ ಹೋಳ್ಕರ್ ಇವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಸಂಬಂಧ ಕರಡು ಪರಿನಿಯಮವನ್ನು ಸಿದ್ಧಪಡಿಲಾಗಿದ್ದು, ಸದರಿ ಪರಿನಿಯಮವನ್ನು ಸರ್ಕಾರದ ಮುಖಾಂತರ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸಲ್ಲಿಸಬೇಕಾಗಿದೆ. ಈ ಸಂಬಂಧ ಸಿದ್ಧಪಡಿಸಿರುವ ಪರಿನಿಯಮವನ್ನು ಮುಂಬರುವ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ವಿಷಯವನ್ನು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

* * * * * * *

<u>ತೀರ್ಮಾನ</u> :

**ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ವಿ.ವಿ.ನಿಲಯದಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಶ್ರೀಮತಿ ಅಹಲ್ಯಾಭಾಯಿ ಹೋಳ್ಕರ್ ಅಧ್ಯಯನ ಪೀಠದ ಕರಡು ಪರಿನಿಯಮವನ್ನು ಸರ್ಕಾರದ ಮುಖಾಂತರ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸಲ್ಲಿಸಲು ಅನುಮೋದನೆ ನೀಡಿತು.**

* * * * * * *

<u>ವಿಷಯ ಸಂಖ್ಯೆ: 169.10</u>

**ವಿಷಯ : M/s. Space Teleinfra Pvt., Ltd., Bengaluru, ರವರ ವತಿಯಿಂದ ವಿವಿ ನಿಲಯದ ಆವರಣದಲ್ಲಿ Network Booster ಅನ್ನು ಅಳವಡಿಸಿಕೊಳ್ಳುವ ಬಗ್ಗೆ.**

* * * * * * *

M/s. Space Teleinfra Pvt., Ltd., Bengaluru, ರವರು ದಿನಾಂಕ: 22.04.2022 ರಂದು ಕುಲಸಚಿವರಿಗೆ ನೀಡಿರುವ ಪ್ರಸ್ತಾವನೆಯಲ್ಲಿ ವಿವಿ ನಿಲಯದ ಆವರಣದಲ್ಲಿ ಸಮರ್ಪಕವಾಗಿ ಮೊಬೈಲ್ ನೆಟ್‌ವರ್ಕ್ ಸಿಗುತ್ತಿಲ್ಲವಾದ್ದರಿಂದ ತಮ್ಮ ಸಂಸ್ಥೆಯವತಿಯಿಂದ ಅಗತ್ಯ ಉಪಕರಣಗಳನ್ನು ಅಳವಡಿಸಿ "Zero Cost Comprehensive Telecom Infrastructure (Multi Operator Mobile Booster) for enhancing mobile coverage of multiple service providers for entire KSOU Buildings and Campus" ಕಾರ್ಯವನ್ನು ಕೈಗೊಳ್ಳುವ ಸಂಬಂಧ ಅನುಮತಿ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯಂತೆ ದಿನಾಂಕ: 06.07.2022 ರಂದು ಕುಲಸಚಿವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಯನ್ನು ರಚಿಸಿ ಅಧಿಸೂಚಿಸಲಾಗಿರುತ್ತದೆ. ಅದರಂತೆ ಸದರಿ ಸಮಿತಿಯು ದಿನಾಂಕ: 08.07.2022 ರಂದು ಸಭೆ ಸೇರಿ ಕೆಳಕಂಡಂತೆ ತೀರ್ಮಾನ ಕೈಗೊಂಡಿರುತ್ತದೆ.

- Committee found that the proposal submitted by M/s. Space Teleinfra Pvt. Ltd., will enhance Mobile network in the University campus and helps students and faculties of the University to use network efficiently.

ಕುಲಪತಿಗಳು

ಕುಲಸಚಿವರು

- Initial Agreement shall be executed between Karnataka State Open University and M/s. Space Teleinfra Pvt. Ltd. for the period of Five (05) years and may be extendable by five years depending on the performance.
- Rent of Rs.5000/-(Rupees Five Thousand only) should be paid every month per mobile operator by M/s. Space Teleinfra Pvt. Ltd. to the University and 10% escalation in rent amount is done once in Three Years.
- Invoice will be raised by the University for consumption of electricity by the equipment's installed by M/s. Space Teleinfra Pvt. Ltd.
- Competent Court at Mysuru shall have exclusive jurisdiction over any dispute arising out of the matters mentioned in agreement to the exclusion of all other Courts.
- After complete scrutiny of the documents, the Committee recommended to provide permission to M/s. Space Teleinfra Pvt. Ltd, to conduct a design survey, installation of Comprehensive Mobile telecom infrastructure and Maintenance of installed equipment at Karnataka State Open University, Mysuru.

ತಜ್ಞರ ಸಮಿತಿಯ ಮೇಲಿನ ತೀರ್ಮಾನದ ಹಿನ್ನೆಲೆಯಲ್ಲಿ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಸದರಿ ಸಂಸ್ಥೆಯವರಿಗೆ ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ದಿನಾಂಕ: 29.07.2022 ರಂದು ಸದರಿ ಸಂಸ್ಥೆಯವರಿಗೆ ನೀಡಲಾಗಿರುವ ಅನುಮತಿ ಪತ್ರ ಹಾಗೂ 5 ವರ್ಷದ ಅವಧಿಗೆ ಒಡಂಬಡಿಕೆ ಮಾಡಿಕೊಳ್ಳುವಂತೆ ತಿಳಿಸಿರುವ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

* * * * * * *

<u>ತೀರ್ಮಾನ</u> :

**ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಈ ವಿಷಯಕ್ಕೆ ಸಂಬಂಧಿಸಿದಂತೆ ವಿ.ವಿ.ನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.**

* * * * * * *

<u>ವಿಷಯ ಸಂಖ್ಯೆ: 169.11</u>

**ವಿಷಯ: ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ/ತತ್ಸಮಾನ ವೃಂದದವರಿಗೆ ವೃತ್ತಿ ಪದೋನ್ನತಿ ಯೋಜನೆಯಡಿ ಪದೋನ್ನತಿ (CAS) ನೀಡುವ ಸಂಬಂಧ ರಚಿಸುವ "Screening-cum-Evaluation Committee and Selection Committee" ಯ ವಿಷಯ ತಜ್ಞರ ಪಟ್ಟಿಯನ್ನು ಅನುಮೋದಿಸುವ ಬಗೆಗೆ.**

* * * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಯು.ಜಿ.ಸಿ ನಿಯಮಗಳನ್ವಯ "Statute Relating to Direct Recruitment and Career Advancement Scheme to Teachers and Librarians in Karnataka State Open University" ಇದಕ್ಕೆ ಸಂಬಂಧಿಸಿದ ಪರಿನಿಯಮವನ್ನು ರಚಿಸಿಕೊಳ್ಳಲಾಗಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳು/ಇನ್ನಿತರೆ ತತ್ಸಮಾನ ವೃಂದದವರಿಗೆ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ವಿವಿಧ ಹಂತಗಳ ಪದೋನ್ನತಿಗಾಗಿ ಅರ್ಜಿ ಸಲ್ಲಿಸುವ ಸಂಬಂಧ ದಿನಾಂಕ: 06.12.2021 ಮತ್ತು 24.12.2021 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಕುಲಪತಿಗಳು



ಕುಲಸಚಿವರು

ವಿಶ್ವವಿದ್ಯಾನಿಲಯದ ಒಟ್ಟು 22 ಅರ್ಹ ಅಧ್ಯಾಪಕರುಗಳು ವಿವಿಧ ಹಂತಗಳ ಪದೋನ್ನತಿಗಾಗಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಅಧ್ಯಾಪಕರುಗಳಿಗೆ CAS Scheme ನಲ್ಲಿ ಪದೋನ್ನತಿ ನೀಡಬೇಕಾಗಿದ್ದು, ಈ ಸಂಬಂಧ "Screening-cum-Evaluation Committee and Selection Committee" ಯನ್ನು ರಚಿಸಬೇಕಾಗಿರುತ್ತದೆ.

ಸಹಾಯಕ ಪ್ರಾಧ್ಯಾಪಕರುಗಳಿಗೆ Academic Level 11 to 12 ಪದೋನ್ನತಿ ನೀಡುವ ಸಂಬಂಧ "Screening-cum-Evaluation Committee" ಯನ್ನು ರಚಿಸಬೇಕಾಗಿದ್ದು, ಸದರಿ ಸಮಿತಿಯು

ಈ ಕೆಳಕಂಡವರುಗಳನ್ನು ಒಳಗೊಂಡಿರುತ್ತದೆ.

1. The Vice-Chancellor or his/her nominee shall be the Chairperson of the committee;
2. Dean of the faculty, wherever applicable. If not available he/she may be coopted from sister University.
3. The Head of the Department/Chairperson of the School. If He/She is not of professor rank may be coopted from sister University; and
4. One subject expert in the subject concerned nominated by the Vice-Chancellor from the university panel of experts.

ಪ್ರಾಧ್ಯಾಪಕ (Academic Level 13A to 14) ಹಾಗೂ ಸಹ ಪ್ರಾಧ್ಯಾಪಕರುಗಳಿಗೆ (Academic Level 12 to 13A) ಪದೋನ್ನತಿ ನೀಡುವ ಸಂಬಂಧ "Selection Committee" ಯನ್ನು ರಚಿಸಬೇಕಾಗಿದ್ದು, ಸದರಿ ಸಮಿತಿಯು

ಈ ಕೆಳಕಂಡವರುಗಳನ್ನು ಒಳಗೊಂಡಿರುತ್ತದೆ.

1. The Vice-Chancellor shall be the Chairperson of the Committee.
2. An academician not below the rank of Professor to be nominated by the Visitor/Chancellor, wherever applicable.
3. Three experts in the subject/field concerned to be nominated by the Vice-chancellor out of the panel of names approved by the relevant statutory body of the University concerned.
4. Dean of the faculty, wherever applicable. If not available he/she may be coopted from sister University.
5. Head /Chairperson of the School. If He/She is not of Professor rank may be coopted from sister University.
6. An academician of Professor Rank belonging to the SC/ST/OBC/Minority/Women/Differently-abled categories, if any of the candidate representing these categories is the applicant, to be nominated by the Vice-Chancellor, if any of the above members of the selection committee does not belong to that category.
7. At least four members, including two outside subject experts, shall constitute the quorum.

ಕುಲಪತಿಗಳು



ಕುಲಸಚಿವರು

ಕ್ರಮ ಸಂಖ್ಯೆ 3ರ ಪ್ರಕಾರವಾಗಿ "Selection Committee" ಯಲ್ಲಿನ ವಿಷಯ ತಜ್ಞರ ಪಟ್ಟಿಯನ್ನು ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಬೇಕಿದೆ.

ಕರಾಮುವಿ ಪರಿನಿಯಮ-1994ರ ಎರಡನೇ ಅನುಸೂಚಿ 12 (2) (Vii) ರನ್ವಯ " ಕುಲಸಚಿವರು ನೇಮಕಾತಿ ಮಂಡಳಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು" ಎಂದಿರುತ್ತದೆ ಸದರಿ ಅಂಶವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರಲಾಗಿದೆ.

ಅಧ್ಯಾಪಕರುಗಳಿಗೆ/ತತ್ಸಮಾನ ವೃಂದದವರಿಗೆ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ಪದೋನ್ನತಿ ನೀಡಲು ರಚಿಸುವ "Screening-cum-Evaluation Committee and Selection Committee"ಗೆ, ಸಂಬಂಧಿಸಿದಂತೆ ವಿಷಯ ತಜ್ಞರ ಪಟ್ಟಿಯನ್ನು ಅನುಮೋದಿಸುವ ಸಂಬಂಧ ವಿಷಯವನ್ನು, ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

* * * * * * *

<u>ತೀರ್ಮಾನ</u> :

**ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ವಿ.ವಿ.ನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರು/ತತ್ಸಮಾನ ವೃಂದದವರಿಗೆ ವೃತ್ತಿ ಪದೋನ್ನತಿ ಯೋಜನೆಯಡಿ ಪದೋನ್ನತಿ (ಸಿ.ಎ.ಎಸ್.) ನೀಡುವ ಸಂಬಂಧ ರಚಿಸುವ Screening cum Evaluation Committee and Selection Committee ಯ ವಿಷಯ ತಜ್ಞರ ಪಟ್ಟಿಯನ್ನು ಅನುಮೋದಿಸಿ, ಮುಂದಿನ ಕ್ರಮ ಕೈಗೊಳ್ಳಲು ಒಪ್ಪಿತು.**

* * * * * * *

<u>ವಿಷಯ ಸಂಖ್ಯೆ: 169.12</u>

ವಿಷಯ : **ಶ್ರೀ ಎಸ್. ಪ್ರದೀಪ್‌ಗಿರಿ, ಸಹಾಯಕ ಕುಲಸಚಿವ ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತುಗೊಳಿಸಿರುವ ಬಗೆಗೆ.**

* * * * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲದ ನೌಕರರ ಸಮಯ ಪಾಲನೆ ಹಾಗೂ ಕಾರ್ಯ ಚಟುವಟಿಕೆಯನ್ನು ಗಮನಿಸಲು ದಿನಾಂಕ: 02.08.2022 ರಂದು ಮಧ್ಯಾಹ್ನ 2.40ರ ವೇಳೆಯಲ್ಲಿ ಮಾನ್ಯ ಕುಲಪತಿಗಳು ಪರೀಕ್ಷಾ ವಿಭಾಗಕ್ಕೆ ಅನಿರೀಕ್ಷಿತ ಭೇಟಿ ನೀಡಿದ ಸಂದರ್ಭದಲ್ಲಿ ಪರೀಕ್ಷಾ ವಿಭಾಗದ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಎಸ್. ಪ್ರದೀಪ್‌ಗಿರಿ, ಸೇರಿದಂತೆ ಅರ್ಧಕ್ಕಿಂತ ಹೆಚ್ಚಿನ ನೌಕರರು ಕಛೇರಿಗೆ ಹಾಜರಾಗದಿರುವುದನ್ನು ಗಮನಿಸಿದ ಮಾನ್ಯ ಕುಲಪತಿಗಳು ಈ ವಿಚಾರವಾಗಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಉಪಕುಲಸಚಿವರು ಹಾಗೂ ಸಹಾಯಕ ಕುಲಸಚಿವರುಗಳನ್ನು ಕರೆದು ಪರೀಕ್ಷಾ ವಿಭಾಗದ ಸಭಾ ಕೊಠಡಿಗೆ ಕರೆಸಿ ವಿಚಾರಿಸುತ್ತಿದ್ದ ಸಂದರ್ಭದಲ್ಲಿ ಶ್ರೀ ಎಸ್. ಪ್ರದೀಪ್‌ಗಿರಿ ಯವರು ಮಾನ್ಯ ಕುಲಪತಿಗಳೊಂದಿಗೆ ಏಕಾಏಕಿ ಅನುಚಿತವಾಗಿ ವರ್ತಿಸಿ ಕೈಮಿಲಾಯಿಸುವ ರೀತಿಯಲ್ಲಿ ಏರುಧ್ವನಿಯಲ್ಲಿ ಉತ್ತರಿಸಿ, ಅಸಭ್ಯವಾಗಿ ವರ್ತಿಸಿ ದುರ್ನಡತೆ ಎಸಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿಯವರ ಮೇಲೆ ಶಿಸ್ತು ಕ್ರಮಕೈಗೊಳ್ಳಲು ದಿನಾಂಕ: 02.08.2022 ರ **'ಟಿಪ್ಪಣಿ'** ಮೂಲಕ ಸದರಿ ಅಧಿಕಾರಿಯನ್ನು ಅಮಾನತ್ತುಗೊಳಿಸುವಂತೆ ಮಾನ್ಯ ಕುಲಪತಿಗಳು ಆದೇಶಿಸಿದ ಹಿನ್ನೆಲೆಯಲ್ಲಿ ಶ್ರೀ ಎಸ್. ಪ್ರದೀಪ್‌ಗಿರಿ ಇವರನ್ನು ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/421/2004-05

ಕುಲಪತಿಗಳು ಕುಲಸಚಿವರು

ದಿ: 02.08.2022 ರ ಆದೇಶದನ್ವಯ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ. ಸದರಿ ವಿಷಯವನ್ನು ಮಾನ್ಯ ವ್ಯವಸ್ಥಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

* * * * * * *

ತೀರ್ಮಾನ :

**ಸಭೆಯ ಅಧ್ಯಕ್ಷರು ಸದರಿ ವಿಷಯವನ್ನು 'defer' ಮಾಡಲು ಸೂಚಿಸಿದ ಮೇರೆಗೆ ವಿಷಯವನ್ನು 'defer' ಮಾಡಲಾಯಿತು.**

* * * * * * *

ವಿಷಯ ಸಂಖ್ಯೆ :- 169.13

**ವಿಷಯ : ಕರಾಮುವಿ ನಿಲಯಕ್ಕೆ Electrical Shuttle ಬ್ಯಾಟರಿ ವಾಹನವನ್ನು ಖರೀದಿಸುವ ಬಗ್ಗೆ**

* * * * * * *

ಕರಾಮುವಿ ನಿಲಯಕ್ಕೆ NAAC ರವರಿಂದ ಮಾನ್ಯತೆ ಪಡೆಯುವ ಸಲುವಾಗಿ CIQA ನಿರ್ದೇಶಕರು ಅಗತ್ಯವಿರುವ ಕೆಲವು ಕೆಲಸಗಳನ್ನು ನಿರ್ವಹಿಸಲು ಪಟ್ಟಿ ಮಾಡಿ ಪತ್ರ ಮುಖೇನ ತಿಳಿಸಿರುತ್ತಾರೆ. ವಿವಿನಿಲಯಕ್ಕೆ ಬರುವ ವಿದ್ಯಾರ್ಥಿಗಳಿಗೆ Electrical Shuttle ವಾಹನ ಖರೀದಿಸುವ ಬಗ್ಗೆ ಕೋರಿರುವ ಹಿನ್ನಲೆಯಲ್ಲಿ Nirantaraa Electric Vehicle 4 Seater ಬ್ಯಾಟರಿ ವಾಹನ ಖರೀದಿಸುವ ವಿಚಾರವಾಗಿ Invoice Rs.5,75,000/- ಗಳಿಗೆ M/s Nirantaraa Automation Systems ರವರು ನೀಡಿರುತ್ತಾರೆ.

ಸದರಿ ಸಂಸ್ಥೆಯವರು Sole Distributor ಆಗಿರುವುದರಿಂದ ಸದರಿ ವಾಹನವನ್ನು ನೇರವಾಗಿ M/s Nirantaraa Automation Systems ರವರಿಂದ ಖರೀದಿಸುವ ಬಗ್ಗೆ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

* * * * * * *

ತೀರ್ಮಾನ :

**ವಿಷಯವನ್ನು ಚರ್ಚಿಸಲಾಯಿತು. ಮಾನ್ಯ ಕುಲಪತಿಗಳು ಮಾತನಾಡಿ, ವಿ.ವಿ.ನಿಲಯಕ್ಕೆ NAAC ಮಾನ್ಯತೆಯ ಅನಿವಾರ್ಯತೆಯಿದ್ದು, ವಿದ್ಯಾರ್ಥಿಗಳ ಬಳಕೆಗೆ ಎಲೆಕ್ಟ್ರಿಕಲ್ ಷಟಲ್ ವಾಹನವನ್ನು ಹೊಂದುವುದು NAAC ಮಾನದಂಡಗಳಲ್ಲಿ ಒಂದಾಗಿರುವುದರಿಂದ, ಎಲೆಕ್ಟ್ರಿಕಲ್ ಷಟಲ್ ವಾಹನವನ್ನು ಖರೀದಿಸಬೇಕಾಗಿರುತ್ತದೆಂದು ಸಭೆಯಲ್ಲಿ ವಿವರಿಸಿದರು. ಮಾನ್ಯ ಕುಲಪತಿಗಳ ವಿವರಣೆಯನ್ನು ಆಲಿಸಿದ ಸಭೆಯು, ಮೆ. ನಿರಂತರ ಆಟೋಮೇಷನ್ ಸಿಸ್ಟಮ್ಸ್ ಇವರಿಂದ ಸದರಿ ವಾಹವನ್ನು ಖರೀದಿಸಲು ಅನುಮೋದನೆ ನೀಡಿತು.**

* * * * * * *

ವಿಷಯ ಸಂಖ್ಯೆ: 169.14

ವಿಷಯ: 1. ಡಾ. ಮಹೇಶ .ವಿ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರ ತಂದೆಯವರ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಬಗೆಗೆ.

2. ಶ್ರೀ. ಶ್ರೀನಿವಾಸ ವಿ, ಡಿ.ಇ.ಓ. ಡೀನ್(ಶೈಕ್ಷಣಿಕ) ವಿಭಾಗ, ಇವರ ಪತ್ನಿಯ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಬಗೆಗೆ.

* * * * * * *

ಕುಲಪತಿಗಳು ಕುಲಸಚಿವರು

1. ಡಾ. ಮಹೇಶ .ವಿ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಇವರ ತಂದೆಯವರಿಗೆ Metro United Health Care, Shivamurthy Circle, Savalanga Road, Shivamogga, ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಒಟ್ಟು ಮೊತ್ತ **ರೂ.2,14,623**/- ಗಳನ್ನು ಮರುಭರಿಕೆಗಾಗಿ ದಿನಾಂಕ: 28.05.2022 ರಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಹುಂಡಿಯಗಳನ್ನು Karnataka Medical Attendance Rule (KMAR) ನಿಯಮ 1963ರ ಪ್ರಕಾರ Central Govt Health Scheme (CGHS), ಬೆಂಗಳೂರು ದರಗಳ ಅನ್ವಯ ಪರಿಶೀಲನೆಯ ನಂತರ **ಪಾವತಿಸಬೇಕಾಗಿರುವ ಹುಂಡಿಯ ಒಟ್ಟು ಮೊತ್ತ ರೂ.1,04,580**/-ಗಳಾಗಿದ್ದು, ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ತಿದ್ದುಪಡಿ ನಿಯಮ-2009 ಅನ್ನು ವಿ.ವಿ ನಿಲಯದಲ್ಲಿ ಅಳವಡಿಸಿಕೊಂಡು ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/810/2010-11, ದಿನಾಂಕ: 04.11.2010 ರಂದು ಕಚೇರಿ ಆದೇಶವಾಗಿರುತ್ತದೆ. ಮರುಭರಿಕೆ ಮಾಡುವ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಕೋರಿದೆ.

2. ಶ್ರೀ ಶ್ರೀನಿವಾಸ .ವಿ, ಡಿ.ಇ.ಓ, ಡೀನ್(ಶೈಕ್ಷಣಿಕ)ವಿಭಾಗ, ಇವರು Clear Medi Radiant Hospital (Unit of Clearmedi Healthcare Pvt Ltd), Vijayanagar, Mysore ಮತ್ತು Kamakshi Hospital, Kuvempunagar, Mysore ಹಾಗೂ Manipal Hospital Pvt Ltd, Siddiqui Nagar, Mysore ಈ ಮೂರು ಆಸ್ಪತ್ರೆಗಳಲ್ಲಿ ಅವರ ಪತ್ನಿಯವರಿಗೆ ಚಿಕಿತ್ಸೆ ಪಡೆದಿರುವ ವೈದ್ಯಕೀಯ ವೆಚ್ಚದ ಹುಂಡಿಯನ್ನು **ಮರುಭರಿಕೆಗಾಗಿ ಒಟ್ಟು ಮೊತ್ತ ರೂ.8,90,000 + 14,122 + 1,20,837= 10,24,959/-ಗಳನ್ನು ಸಲ್ಲಿಸಿರುತ್ತಾರೆ.**

ಸದರಿ ಹುಂಡಿಯಗಳನ್ನು Karnataka Medical Attendance Rule (KMAR) ನಿಯಮ 1963ರ ಪ್ರಕಾರ Central Govt Health Scheme (CGHS), ಬೆಂಗಳೂರು ದರಗಳ ಅನ್ವಯ ಪರಿಶೀಲನೆಯ ನಂತರ **ಪಾವತಿಸಬೇಕಾಗಿರುವ ಹುಂಡಿಯ ಒಟ್ಟು ಮೊತ್ತ ರೂ. 6,17,708/-ಗಳಾಗಿದ್ದು,** ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ತಿದ್ದುಪಡಿ ನಿಯಮ-2009 ಅನ್ನು ವಿ.ವಿ ನಿಲಯದಲ್ಲಿ ಅಳವಡಿಸಿಕೊಂಡು ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/810/2010-11, ದಿನಾಂಕ: 04.11.2010 ರಂದು ಕಚೇರಿ ಆದೇಶವಾಗಿರುತ್ತದೆ. ಸದರಿ ಹುಂಡಿಗಳ ಮರುಭರಿಕೆ ಮಾಡುವ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಕೋರಿದೆ.

* * * * * * *

<u>ತೀರ್ಮಾನ</u> :

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. (1) ಡಾ. ಮಹೇಶ.ವಿ., ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರ ತಂದೆಯವರ ವೈದ್ಯಕೀಯ ವೆಚ್ಚ ರೂ.1,04,580/– ಗಳನ್ನು ಮರಭರಿಕೆ ಮಾಡಲು ಅನುಮೋದಿಸಿತು. (2) ಶ್ರೀ ಶ್ರೀನಿವಾಸ.ವಿ., ಡಿ.ಇ.ಒ., ಡೀನ್ (ಶೈ) ವಿಭಾಗ, ಇವರ ಪತ್ನಿಯ ಪ್ರಕರಣದಲ್ಲಿ ಮರುಭರಿಕೆ ಮಾಡಬೇಕಾದ ಮೊತ್ತವು ರೂ.6,17,708/– ಗಳಾಗಿದ್ದು, ಇಷ್ಟು ದೊಡ್ಡ ಮೊತ್ತವನ್ನು ಒಂದು ಭಾರಿಗೆ ಪಾವತಿಸಲು ಪರಿನಿಯಮದಲ್ಲಿ ಅವಕಾಶವಿರುವುದಿಲ್ಲ ಎಂಬ ಅಂಶವನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಮಾನ್ಯ ಸದಸ್ಯರುಗಳಾದ ಶ್ರೀ ಎಲ್. ನಾಗೇಂದ್ರರವರು, ಶ್ರೀಮತಿ ಪಿ.ಲಾವಣ್ಯರವರು ಹಾಗೂ ಪ್ರೊ. ಯಶಸ್ವಿನಿ.ಎಸ್. ಇವರುಗಳು ಮಾತನಾಡಿ, ಈ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಪಾವತಿಸುವಂತೆ ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಕುಲಪತಿಗಳು, ದೊಡ್ಡ ಮೊತ್ತದ ಹಣವನ್ನು ಮರುಭರಿಕೆ ಮಾಡಿದಲ್ಲಿ, ಅದು ವಿ.ವಿ.ನಿಲಯವು ಅಳವಡಿಸಿಕೊಂಡಿರುವ

ಕುಲಪತಿಗಳು



ಕುಲಸಚಿವರು

ಪರಿನಿಯಮಕ್ಕೆ ವಿರುದ್ಧವಾಗಿ ನಡೆದುಕೊಂಡಂತಾಗುತ್ತದೆ ಮತ್ತು ವ್ಯವಸ್ಥಾಪನಾ ಮಂಡಳಿಯನ್ನು ದಿಕ್ಕು ತಪ್ಪಿಸಿದಂತಾಗುತ್ತದೆ ಎಂದು ತಿಳಿಸಿದರು. ಅಂತಿಮವಾಗಿ, ಪ್ರಸ್ತುತ ವಿ.ವಿ.ನಿಲಯದ ಪರಿನಿಯಮಗಳನ್ವಯ ಪಾವತಿಸಲು ಕ್ರಮ ಕೈಗೊಳ್ಳುವಂತೆ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

* * * * * * *

**ವಿಷಯ ಸಂಖ್ಯೆ: 169.15**

ವಿಷಯ : **Roadmap to scale KSOU to 200K Students** ಸಂಬಂಧ ಕೈಗೊಳ್ಳುವ ಬಗ್ಗೆ.

* * * * * * *

ಕರ್ನಾಟಕ ರಾಜ್ಯ ಸರ್ಕಾರವು ತನ್ನ ರಾಜ್ಯಪತ್ರ ಸಂಖ್ಯೆ: **DPAL 43 SHASANA 2020 dated 30-12-2020** ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನು ರಾಜ್ಯದಲ್ಲಿ ದೂರಶಿಕ್ಷಣ ನೀಡುವ ಏಕೈಕ ವಿಶ್ವವಿದ್ಯಾನಿಲಯವೆಂದು ಅಧಿಸೂಚನೆ ಹೊರಡಿಸಿರುತ್ತದೆ. ಆದಾಗ್ಯೂ 2020-21 ಹಾಗೂ 2021-22ನೇ ಸಾಲಿನ ಪ್ರವೇಶಾತಿಗಳಲ್ಲಿ ಗಣನೀಯ ಪ್ರಮಾಣದಲ್ಲಿ ಪ್ರವೇಶಾತಿ ಏರಿಕೆ ಕಂಡುಬಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರವೇಶಾತಿ ಸಂಖ್ಯೆ ಹೆಚ್ಚಿಸುವ ಸಂಬಂಧ ಸೂಕ್ತ ಕ್ರಮಕೈಗೊಳ್ಳಲು ವೃತ್ತಿಪರ ವರದಿಯನ್ನು ಬಾಹ್ಯ ಸಂಸ್ಥೆಗಳಿಂದ ಪಡೆಯುವ ಬಗ್ಗೆ ಉದ್ದೇಶಿಸಲಾಗಿದೆ. ಈ ಬಗ್ಗೆ ಈಗಾಗಲೇ E&Y ಸಂಸ್ಥೆಯವರು ಪ್ರಸ್ತಾವನೆಯನ್ನು ನೀಡಿದ್ದು, ದಿನಾಂಕ: 24.02.2022 ರಂದು ಮಾನ್ಯ ಕುಲಪತಿಗಳು ಈ ಬಗ್ಗೆ ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ವರದಿಯನ್ನು ನೀಡುವಂತೆ ತಿಳಿಸಿರುತ್ತಾರೆ. ದಿನಾಂಕ: 24.02.2022 ರಂದು ನಡೆದ ಸಭೆಯಲ್ಲಿ ವಿವಿ ನಿಲಯದಲ್ಲಿ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸಲು ಬಾಹ್ಯ ಸಂಸ್ಥೆಯಿಂದ ವೃತ್ತಿಪರ ವರದಿಯನ್ನು ಮೆ. ಕಿಯೋನಿಕ್ಸ್, ಬೆಂಗಳೂರು ರವರಿಂದ ಪಡೆಯುವುದು ಎಂಬುದಾಗಿ ತೀರ್ಮಾನವಾಗಿರುತ್ತದೆ.

ಈ ಸಂಬಂಧ ದಿನಾಂಕ: 09.03.2022 ರಂದು ಮೆ. ಕಿಯೋನಿಕ್ಸ್, ಬೆಂಗಳೂರು ರವರಿಗೆ Project Development Service ಸರಬರಾಜು ಮಾಡುವ ಸಂಬಂಧ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಲಾಗಿರುತ್ತದೆ. ಈ ಸಂಬಂಧ ಸದರಿ ಸಂಸ್ಥೆಯವರು ದಿನಾಂಕ: 10.08.2022 ರಂದು ರೂ.51,17,175/- (ರೂ. ಐವತ್ತೊಂದು ಲಕ್ಷದ ಹದಿನೇಳು ಸಾವಿರದ ಒಂದುನೂರ ಎಪ್ಪತ್ತೈದು ಮಾತ್ರ) ಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯ ಅನುಷ್ಠಾನ ಕಾರ್ಯವನ್ನು ಪ್ರವೇಶಾತಿ ವಿಭಾಗದಿಂದ ಕೈಗೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು ಚರ್ಚೆ ಹಾಗೂ ನಿರ್ಣಯಕ್ಕಾಗಿ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಿದೆ.

* * * * * * *

ತೀರ್ಮಾನ :

ಸದರಿ ವಿಷಯದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ, ಪ್ರಸ್ತಾವನೆಯ ಅವಶ್ಯಕತೆ ಕುರಿತು ವಿವರಣೆ ನೀಡುವಂತೆ ಕೇಳಿದರು. ಮಾನ್ಯ ಕುಲಪತಿಗಳು ಮಾತನಾಡಿ, ವಿ.ವಿ.ನಿಲಯದಲ್ಲಿ 2020-21 ಮತ್ತು 2021-22ನೇ ಸಾಲಿನಲ್ಲಿ ಪ್ರವೇಶಾತಿಯಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡುಬಂದಿರುವುದಿಲ್ಲ. ಆದ್ದರಿಂದ, ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಕ್ರಮವನ್ನು ಕೈಗೊಳ್ಳಲಾಗುತ್ತಿರುವುದಾಗಿ ಸಭೆಗೆ ವಿವರಣೆ ನೀಡಿದರು. ವಿಷಯವನ್ನು ಕೂಲಂಕಷವಾಗಿ ಚರ್ಚಿಸಿದ ಸಭೆಯು, ರಾಷ್ಟ್ರ/ಅಂತರರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯಗಳು ಈ ಸಂಬಂಧ ಏನೇನು ಪರಿಣಾಮಕಾರಿ ಕ್ರಮಗಳನ್ನು

ಕುಲಪತಿಗಳು



ಕುಲಸಚಿವರು

ಕೈಗೊಂಡಿವೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಲು ವ್ಯವಸ್ಥಾಪನಾ ಮಂಡಳಿಯ ಸದಸ್ಯರನ್ನೊಳಗೊಂಡ ನಿಯೋಗವನ್ನು ರಚಿಸುವುದು ಹಾಗೂ ನಿಯೋಗವು ಸಲ್ಲಿಸುವ ವರದಿಯನ್ವಯ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

* * * * * * *

<u>ವಿಷಯ ಸಂಖ್ಯೆ : 169.16</u>

**ವಿಷಯ : ಹಣಕಾಸು ಸಮಿತಿಯ 85ನೇ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.**

* * * * * * *

ದಿನಾಂಕ: 25.08.2022ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ 85ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿಯ 169ನೇ ಸಾಮಾನ್ಯ ಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * *

<u>ತೀರ್ಮಾನ</u> :

**ಹಣಕಾಸು ಸಮಿತಿಯ 85ನೇ ಸಭೆಯ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಸಭೆಯ ನಡವಳಿಯನ್ನು ಅನುಮೋದಿಸಿತು.**

* * * * * * *

<u>ವಿಷಯ ಸಂಖ್ಯೆ : 169.17</u>

**ವಿಷಯ : ಕರಾಮುವಿ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಸಂಭಾವನೆ ನಿಗದಿಗೊಳಿಸುವ ಬಗ್ಗೆ.**

* * * * * *

ಕರಾಮುವಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಸಂಯೋಜನಾಧಿಕಾರಿಗಳು ಮನವಿ ಸಲ್ಲಿಸಿ ಈಗಾಗಲೆ ನೀಡುತ್ತಿರುವ ಸಂಭಾವನೆ ತುಂಬಾ ಕಡಿಮೆಯಾಗಿದ್ದು, ಪ್ರವೇಶಾತಿ ಪಡೆದ ಎಲ್ಲಾ ಪ್ರಥಮ, ದ್ವಿತೀಯ ಹಾಗು ತೃತೀಯ ವರ್ಷದ ಕಲಿಕಾರ್ಥಿ ಪ್ರವೇಶಾತಿಗಳು, ಕಲಿಕಾರ್ಥಿ ಸಹಾಯ ಕೇಂದ್ರದ ಲಾಗಿನ್ ಐಡಿಯಲ್ಲಿಯೇ ಬರುವಂತೆ ಮಾಡಿಕೊಂಡು ಈ ಮೂರು ವರ್ಷದ ಪ್ರತಿಯೊಂದು ಪ್ರವೇಶಾತಿಗೂ ಸಹ ಈ ಕೆಳಗಿನ ಯಾವುದಾದರೂ ಒಂದು ಮಾದರಿಯಲ್ಲಿ ಸೂಕ್ತ ಸಂಭಾವನೆಯನ್ನು ಕೊಡಬೇಕೆಂದು ಎಲ್ಲಾ ಕಲಿಕಾರ್ಥಿ ಸಹಾಯ ಕೇಂದ್ರಗಳ ಸಂಯೋಜನಾಧಿಕಾರಿಗಳು ಈ ಕೆಳಕಂಡಂತೆ ಸಂಭಾವನೆ ನಿಗಧಿಪಡಿಸಲು ಕೋರಿರುತ್ತಾರೆ.

| ಎಲ್ಲಾ ಪ್ರಥಮ, ದ್ವಿತೀಯ ಹಾಗು ತೃತೀಯ ವರ್ಷದ ಕಲಿಕಾರ್ಥಿಗಳ ಪ್ರವೇಶಾತಿಗೆ | | |
|---|---|---|
| 1. | ಪ್ರತಿಯೊಂದು ಪ್ರವೇಶಾತಿಗೆ | 25% |
| 2. | ಪ್ರತಿಯೊಂದು ಪ್ರವೇಶಾತಿಗೆ | 15% |
| 3. | ಪ್ರತಿಯೊಂದು ಪ್ರವೇಶಾತಿಗೆ | UG : BA/B.Com -1000/-<br>All Sem Courses – 2000/-<br>PG: MA/M.Com – 1500/-<br>M.Sc/MBA -2500/-<br>All PG Diploma – 1000/- |

ಕುಲಪತಿಗಳು ಕುಲಸಚಿವರು

ಈ ಮೇಲಿನಂತೆ ಸಂಭಾವನೆ ನಿಗಧಿ ಪಡಿಸುವ ಬಗ್ಗೆ ಚರ್ಚಿಸಿ ತೀರ್ಮಾನಿಸಲು ವಿಷಯವನ್ನು ಮಂಡಿಸಲಾಗಿದೆ.

* * * * * * *

ತೀರ್ಮಾನ :

**ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಕರಾಮುವಿ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರಸ್ತುತ ವಿ.ವಿ.ನಿಲಯವು ನಿಗಧಿಪಡಿಸಿರುವ ಸಂಭಾವನೆಯು ಕಡಿಮೆಯಾಗಿರುವುದನ್ನು ಮನಗಂಡು, ಪ್ರಥಮ, ದ್ವಿತೀಯ ಹಾಗೂ ತೃತೀಯ ವರ್ಷದ ಕಲಿಕಾರ್ಥಿಗಳ ಪ್ರತಿ ಪ್ರವೇಶಾತಿಗೆ ಏಕಸಾಮ್ಯತೆಯಾಗಿ ರೂ.750/- ಗಳನ್ನು ನಿಗಧಿಪಡಿಸಿ, ಸಂಭಾವನೆಯನ್ನು ಪಾವತಿಸುವಂತೆ ತೀರ್ಮಾನಿಸಿತು.**

* * * * * * *

ವಿಷಯ ಸಂಖ್ಯೆ : 169.18

**ವಿಷಯ : 22ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.**

* * * * * * *

ದಿನಾಂಕ: 19.08.2022ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಯ 22ನೇ ವಿಶೇಷ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿಯ 169ನೇ ಸಾಮಾನ್ಯ ಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * *

ತೀರ್ಮಾನ :

**ಶೈಕ್ಷಣಿಕ ಮಂಡಳಿಯ 22ನೇ ವಿಶೇಷ ಸಭೆಯ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಸಭೆಯ ನಡವಳಿಯನ್ನು ಅನುಮೋದಿಸಿತು.**

* * * * * * *

ವಿ.ವಿ.ನಿಲಯದ ವ್ಯವಸ್ಥಾಪನಾ ಮಂಡಳಿಯ 169ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ಎಲ್ಲ ವಿಷಯಗಳು ಚರ್ಚೆಗೊಂಡು, ಸಭೆಯು ಪೂರ್ಣಗೊಂಡ ನಂತರ ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದ ಸುಸೂತ್ರ ಆಡಳಿತ ನಿರ್ವಹಣೆ ದೃಷ್ಟಿಯಿಂದ ಕೈಗೊಂಡಿರುವ ಕೆಲವು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದ ವರದಿಯನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತಂದರು. ಸಭೆಯಲ್ಲಿ ಮಾನ್ಯ ಕುಲಪತಿಗಳು ಮಾತನಾಡಿ, (1) ವಿ.ವಿ.ನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರ ಪದನಾಮ ಬದಲಾವಣೆ ಮಾಡಿ, ಅವರುಗಳಿಗೆ ಗ್ರೇಡೆಡ್ ಪೇ ಮತ್ತು ಇತರೆ ಸೌಲಭ್ಯಗಳನ್ನು ಜಾರಿಗೊಳಿಸಿರುವ ವಿಷಯವನ್ನು (2) ಕಾಲಿಕ ವೇತನ ಶ್ರೇಣಿಯಲ್ಲಿ 10 ವರ್ಷಗಳ ಸೇವೆ ಪೂರೈಸಿರುವ ನೌಕರರುಗಳನ್ನು ಮಂಜೂರಾದ ಹುದ್ದೆಗೆ ಎದುರಾಗಿ ಖಾಲಿ ಇರುವ ಹುದ್ದೆಗಳಿಗೆ ಕರ್ನಾಟಕ ಸರ್ಕಾರದ ಮೀಸಲಾತಿ ನಿಯಮಗಳನ್ನು ಅಳವಡಿಸಿಕೊಂಡು, ಅವರುಗಳ ಸೇವೆಯನ್ನು ವಿಲೀನಗೊಳಿಸಿ, ಆಯಾ ಹುದ್ದೆಗಳಿಗೆ ಪ್ರಸ್ತುತ ಜಾರಿಯಲ್ಲಿರುವ ವೇತನ ಶ್ರೇಣಿಯೊಂದಿಗೆ ನಿಯಮಾನುಸಾರ ಲಭ್ಯವಾಗುವ ಭತ್ಯೆಗಳು ಮತ್ತು ಇನ್ನಿತರೆ ಸೌಲಭ್ಯಗಳನ್ನು ನೀಡುತ್ತಿರುವ ವಿಷಯವನ್ನು ಹಾಗೂ (3) ಪ್ರಾದೇಶಿಕ ನಿರ್ದೇಶಕರು (ತಾತ್ಕಾಲಿಕ) ಇವರುಗಳಿಗೆ ಗ್ರೇಡೆಡ್ ಪೇ ಮತ್ತು ಇತರೆ ಸೌಲಭ್ಯಗಳನ್ನು ವಿಸ್ತರಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಮೇಲೆ ವಿವರಿಸಿರುವ ಮೂರೂ ವಿಷಯಗಳ ಬಗ್ಗೆ ವಿವರಣೆಯನ್ನು ಪಡೆದುಕೊಂಡ ಸಭೆಯು, ಸದರಿ ವಿಷಯಗಳ ಮೇಲೆ ಯಾವುದೇ ನೌಕರರು ಯಾವುದಾದರೂ ಆಕ್ಷೇಪಣೆ ಸಲ್ಲಿಸಿದಲ್ಲಿ, ಅದನ್ನು

ಕುಲಪತಿಗಳು



ಕುಲಸಚಿವರು

ಪರಿಶೀಲಿಸಿ, ಸರಿಪಡಿಸಿ, ಕ್ರಮ ವಹಿಸಲು ಕುಲಪತಿಗಳಿಗೆ ಅಧಿಕಾರ ನೀಡಿ, ಇದುವರೆವಿಗೆ ವಿ.ವಿ.ನಿಲಯವು ಕೈಗೊಂಡಿರುವ ಕ್ರಮವನ್ನು ಸರ್ವಾನುಮತದಿಂದ ಒಪ್ಪಿತು.

ಮುಂದುವರೆದು, ಶ್ರೀ ಪುಟ್ಟಣ್ಣನವರು ಮಾತನಾಡಿ, ಜಸ್ಟೀಸ್ ಡಾ. ಕೆ. ಭಕ್ತವತ್ಸಲ ಸಮಿತಿ ವಿಚಾರಣೆ ನಂತರದ ಅವಧಿಯಲ್ಲಿ ನೇಮಕಗೊಂಡಿರುವ ತಾತ್ಕಾಲಿಕ ನೌಕರರುಗಳಿಗೂ ಸಹ ವಿದ್ಯಾರ್ಹತೆಗೆ ತಕ್ಕಂತೆ ಹುದ್ದೆಯ ಪದನಾಮಗೊಳಿಸುವ ಸಂಬಂಧ ಕ್ರಮ ಕೈಗೊಳ್ಳಲು ಸಲಹೆ ನೀಡಿದರು. ಅದರಂತೆ, ಇನ್ನುಳಿದ ನೌಕರರ ಸಂಬಂಧ ಆಗಿರುವ ನ್ಯೂನತೆಗಳನ್ನು ಸರಿಪಡಿಸಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ವಿ.ವಿ.ನಿಲಯದಲ್ಲಿ ಸೃಜನೆಯಾಗಿ ಖಾಲಿ ಇರುವ ಎಸ್ಟೇಟ್ ಆಫೀಸರ್ ಹುದ್ದೆಯಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಲೋಕೇಶ್‌ರವರನ್ನು ಅವರ ವಿದ್ಯಾರ್ಹತೆ ಮತ್ತು ಅನುಭವದ ಆಧಾರದ ಮೇಲೆ ಕಾಲಿಕ ವೇತನವನ್ನು ನಿಗಧಿಗೊಳಿಸಲು ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣರವರು ಸೂಚಿಸಿದರು. ಸಭೆಯು ಇದಕ್ಕೆ ಅನುಮೋದಿಸಿತು.

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 169ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಎಲ್ಲ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

* * * * * * *

ಕುಲಪತಿಗಳು | ಕುಲಸಚಿವರು